


# ಕಳೆದ ದಿನಗಳ ನೆನಪುಗಳು



(ಸ್ವಾಮಿ ವಿರಜಾನಂದರ ಜೀವನ ಹಾಗೂ ಕೆಲವು ಸಮಕಾಲೀನ ಘಟನೆಗಳು)

ಮೂಲ ಬಂಗಾಳಿ: ಸ್ವಾಮಿ ಶ್ರದ್ಧಾನಂದ

ಅನುವಾದ: ಪ್ರವ್ರಾಜಿಕಾ ಯೋಗಾತ್ಮಪ್ರಾಣಾ

## ಭಾಗ ೨೮

ವಿರಜಾನಂದರು ಕೆಲವೊಮ್ಮೆ ಸ್ವಾಮೀಜಿಯವರ ತಮ್ಮನಾದ ಮಹೇಂದ್ರನಾಥ ದತ್ತರ ಬಳಿಗೆ ಹೋಗಿ, ಹಿಂದಿನ ಪುಣ್ಯಸ್ಮೃತಿಗಳನ್ನು ಮೆಲುಕು ಹಾಕಿಬರುತ್ತಿದ್ದರು. ಕೊಲ್ಕತ್ತೆಯಲ್ಲಿ ರಾಮಕೃಷ್ಣ-ವಿವೇಕಾನಂದರ ಹೆಸರಿನಲ್ಲಿ ನಡೆಯುತ್ತಿದ್ದ ಕೆಲವು ಸಂಸ್ಥೆಗಳಿದ್ದವು. ಎಂಟಾಲಿಯ ರಾಮಕೃಷ್ಣ ಅರ್ಚನಾಲಯ, ಬಹು ಬಜಾರಿನ ಶ್ರೀರಾಮಕೃಷ್ಣ ಅನಾಥ ಭಂಡಾರ್, ಕಾರ್ನ್‌ವಾಲಿಸ್ ಸ್ಟ್ರೀಟಿನ ವಿವೇಕಾನಂದ ಸೊಸೈಟಿ, ಇಲ್ಲಿಯ ಉತ್ಸವಗಳಿಗೆ ಕರೆ ಬರುತ್ತಿದ್ದವು. ವಿರಜಾನಂದರು ಮಠದ ಇತರ ಸಂನ್ಯಾಸಿಗಳೊಂದಿಗೆ ಹೋಗಿ ಉತ್ಸವಗಳಲ್ಲಿ ಭಾಗವಹಿಸಿ, ಅಲ್ಲಿಯ ಪರಿಚಾರಕ ವರ್ಗ ಹಾಗೂ ಕಾರ್ಯಕರ್ತರಿಗೆ ಉತ್ಸಾಹ ನೀಡಿ ಬರುತ್ತಿದ್ದರು. ಹಬ್ಬ-ಹರಿದಿನಗಳಲ್ಲಿ ಆಮಂತ್ರಿತರಾಗಿ ಕೆಲವೊಮ್ಮೆ ಭಕ್ತರ ಮನೆಗಳಿಗೂ ಹೋಗಿ ಬರುತ್ತಿದ್ದರು. ಆ ಸಮಯದಲ್ಲಿ 'ಉದ್ಬೋಧನ' ಮಠದಲ್ಲಿ ಪ್ರತಿ ಭಾನುವಾರ ವೇದಾಂತ ದರ್ಶನಗಳ ಬಗ್ಗೆ ಜನಸಾಮಾನ್ಯರಿಗಾಗಿ ಸ್ವಾಮಿ ಓಂಕಾರಾನಂದರಿಂದ ಪ್ರವಚನವಿರುತ್ತಿತ್ತು. ಈ ಪ್ರವಚನಗಳಲ್ಲಿ ವಿರಜಾನಂದರು ಒಬ್ಬ ಉತ್ಸಾಹಿ ಶ್ರೋತೃವಾಗಿ ಪಾಲ್ಗೊಳ್ಳುತ್ತಿದ್ದರು.

ಬೇಲೂರು ಮಠದ ಉತ್ತರಕ್ಕೆ ಇದ್ದ 'ಸೋನಾರ್ ಬಾಗಾನ್' ಎಂಬ ಹೆಸರಿನ ತೋಟದ ಮನೆಯನ್ನು ೧೯೩೦ರ ಸೆಪ್ಟಂಬರ್ ತಿಂಗಳಲ್ಲಿ ಮಠಕ್ಕೆ ಕೊಂಡುಕೊಳ್ಳಲಾಯಿತು. ಆ ಮನೆಯ ದುರಸ್ತಿ ಹಾಗೂ ಕಾನೂನಿಗೆ ಸಂಬಂಧಿಸಿದ ಕೆಲಸಗಳಿಗಾಗಿ ವಿರಜಾನಂದರು ಸ್ವಲ್ಪ ಹೆಚ್ಚಾಗಿಯೇ ಓಡಾಡಬೇಕಾಯಿತು. ತೋಟದ ಮನೆಯು ಮಠಕ್ಕೆ ಹತ್ತಿರವಾಗಿದ್ದು, ಶ್ರೀಮಾತೆಯವರ ಪುಣ್ಯಸ್ಮೃತಿಯಿಂದ ಕೂಡಿತ್ತು . ಆದ್ದರಿಂದ ಸ್ವಾಮಿ ಶಿವಾನಂದರು ಮತ್ತು ಟ್ರಸ್ಟಿಗಳು (ವಿಶ್ವಸ್ತರು) ಅದನ್ನು ಮಠಕ್ಕೆ ಸೇರ್ಪಡಿಸಲು ತುಂಬ ಉತ್ಸಾಹಿಗಳಾಗಿದ್ದರು.

ಅಕ್ಟೋಬರ್ ೧೮ರಂದು ಮಿಸೆಸ್ ಸೇವಿಯರ್ ಅವರ ಜನ್ಮದಿನ. 'ಉದ್ಬೋಧನ' ಮಠದ ಮೂರನೇ ಮಹಡಿಯ ಉತ್ತರ ದಿಕ್ಕಿನಲ್ಲಿದ್ದ ಕೋಣೆಯಲ್ಲಿ ಕುಳಿತು ವಿರಜಾನಂದರು ಬಹು ದೂರದ ಇಂಗ್ಲೆಂಡಿನಲ್ಲಿ ರೋಗಶಯ್ಯೆಯಲ್ಲಿ ಮಲಗಿದ್ದ ಆ ವಯೋವೃದ್ಧೆಯ ಬಗ್ಗೆ ಚಿಂತಿಸತೊಡಗಿದರು. ಅವರು ಅಂದು ತಮ್ಮ ೮೩ನೇ ವರ್ಷಕ್ಕೆ ಕಾಲಿಡುತ್ತಿದ್ದರು. ಈ ಜೀವನದಲ್ಲಿ ಅದು ಅವರ ಕೊನೆಯ ಜನ್ಮದಿನವಾಗಿತ್ತು. ಮಿಸೆಸ್ ಸೇವಿಯರ್ ಎರಡು ದಿನಗಳ ನಂತರವೇ (೧೯೩೦ರ ಅಕ್ಟೋಬರ್ ಇಪ್ಪತ್ತರಂದು) ರಾತ್ರಿ ೧.೪೫ ಕ್ಕೆ ತಮ್ಮ ನಶ್ವರ ದೇಹವನ್ನು ತೊರೆದಿದ್ದರು. ವಿರಜಾನಂದರಿಗೆ ವಿಷಾದ ಮತ್ತು ದುಃಖದ ನೆನಪುಗಳು ಒಮ್ಮೆಗೇ ಮೇಲೆದ್ದು ಬಂದವು.

ಅಕ್ಟೋಬರ್ ೨೧ರಂದು ಕಾಳೀಪೂಜೆಯಿತ್ತು. ವಿರಜಾನಂದರು ಮಠಕ್ಕೆ ಬಂದು ರಾತ್ರಿಯಿಡೀ ನಡೆಯುವ ಪೂಜೆಯನ್ನು ವೀಕ್ಷಿಸಿದರು. ಆ ರಾತ್ರಿಯ ಕೊನೆಯ ಜಾವದಲ್ಲಿ ಇಬ್ಬರು ಬ್ರಹ್ಮಚಾರಿಗಳು ಮಠಾಧ್ಯಕ್ಷರಾದ ಮಹಾಪುರುಷ ಮಹಾರಾಜರಿಂದ ಪವಿತ್ರವಾದ ಸಂನ್ಯಾಸ ದೀಕ್ಷೆಯನ್ನು ಪಡೆದರು.

ವಿರಜಾನಂದರಿಗೆ ಒಂದು ಕಡೆ ಮಠ ಮತ್ತು ಮಿಷನ್ನಿನ ಹಂಗಾಮಿ ಕಾರ್ಯದರ್ಶಿಯ ಗುರುತರ ಜವಾಬ್ದಾರಿಯಾದರೆ, ಮತ್ತೊಂದೆಡೆ ನಿವೇದಿತಾ ವಿದ್ಯಾಲಯದ ಸೆಕ್ರೆಟರಿಯ ಕೆಲಸ. ಹೀಗೆ ಸುಮಾರು ಒಂದು ವರ್ಷ ಕಳೆಯುವಷ್ಟರಲ್ಲಿ ಅವರು ತುಂಬ ಬಳಲಿದರು. ಪೂಜ್ಯ ಮಹಾಪುರುಷ ಮಹಾರಾಜರು ಅವರಿಗೆ ಕೆಲ ತಿಂಗಳುಗಳ ವಿಶ್ರಾಂತಿ ತೆಗೆದುಕೊಳ್ಳಲು ಅನುಮತಿ ನೀಡಿದರು. ಟ್ರಸ್ಟಿಗಳ ಮೀಟಿಂಗ್‌ನಲ್ಲಿ ಅವರಿಗೆ ೧೯೩೧ರ ಜನವರಿ ೩೧ರ ವರೆಗೆ ರಜೆಯನ್ನು ನೀಡಿದರು. ವಿರಜಾನಂದರು ಶ್ಯಾಮಲಾತಾಲ್‌ಗೆ ಹೋಗಿ ವಿಶ್ರಮಿಸಲು ನಿಶ್ಚಯಿಸಿದರು, ಇದಕ್ಕಾಗಿ ಮಹಾಪುರುಷ ಮಹಾರಾಜರ ಸಮ್ಮತಿಯನ್ನು ಪಡೆದರು.

ನವೆಂಬರ್ ೧೫ರಂದು ಹೌರಾ ನಿಲ್ದಾಣದಿಂದ ದೆಹಲಿಗೆ ಹೋಗುವ ರೈಲೊಂದರ 'ಇಂಟರ್ ಕ್ಲಾಸ್' ಡಬ್ಬಿಯಲ್ಲಿ ಕುಳಿತು, ಸಂಜೆ ನಾಲ್ಕೂವರೆಗೆ ವಿರಜಾನಂದರು ತಮ್ಮ ಪ್ರಯಾಣವನ್ನು ಬೆಳೆಸಿದರು. ಮಾರನೇ ದಿನ ಮಧ್ಯಾಹ್ನ ಹತ್ರಾಸ್ ಸ್ಟೇಷನನ್ನು ತಲುಪಿದರು. ಅಲ್ಲಿಂದ ರೈಲನ್ನು ಬದಲಿಸಿ ಮಥುರೆಗೆ, ಮಥುರೆಯಿಂದ ಬೃಂದಾವನಕ್ಕೆ. ಅಲ್ಲಿಗೆ ಬರುವಷ್ಟರಲ್ಲಿ ಸಂಜೆಯಾಗಿತ್ತು. ವಿರಜಾನಂದರ ವೃದ್ಧೆಯಾದ ತಾಯಿಯು ಕಾಲಾಬಾಬುವಿನ ಕುಂಜದಲ್ಲಿ ವಾಸವಾಗಿದ್ದರು; ಕಠಿಣ ರೋಗದಿಂದ ಪೀಡಿತರಾಗಿದ್ದರು. ವಿರಜಾನಂದರು ಕೆಲವು ದಿನ ಅಲ್ಲಿ ಉಳಿದುಕೊಂಡು ಅವರ ಸೇವೆಯನ್ನು ಮಾಡಿದರು. ದಿನವೂ ಎಂಬಂತೆ ಸೇವಾಶ್ರಮಕ್ಕೆ ಹೋಗಿ ಬರುತ್ತಿದ್ದರು. ಕೆಲವು ದಿನ ಸಂಜೆ ಸುತ್ತಾಡಿ ಮನಸ್ಸಿಗೆ ತೃಪ್ತಿಯಾಗುವವರೆಗೂ ಬೃಂದಾವನದ ಎಲ್ಲ ಮಂದಿರಗಳನ್ನೂ ಸಂದರ್ಶಿಸಿದರು.

೧೯೩೦ರ ನವೆಂಬರ್ ೨೬ರಂದು ಶ್ಯಾಮಲಾತಾಲ್ ತಲುಪಿದರು. ಮಾಯಾವತಿ ಹಾಗೂ ಶ್ಯಾಮಲಾತಾಲ್ ಈ ಉಭಯ

ಆಶ್ರಮದ ಏಕನಿಷ್ಠ ಬಂಧುಗಳಾಗಿದ್ದ ಟನಕ್‌ಪುರದ ಕಂಟ್ರಾಕ್ಟರ್ ಬಾಬು ಶ್ಯಾಮಸಿಂಗ್ ತನ್ನ ಕುದುರೆಯನ್ನು ಕಳುಹಿಸಿದ್ದನು. ಅದನ್ನೇರಿ ವಿರಜಾನಂದರು ಟನಕ್‌ಪುರದಿಂದ ೧೩ ಮೈಲಿಗಳನ್ನು ಕ್ರಮಿಸಿ, ಶ್ಯಾಮಲಾತಾಲ್ ತಲುಪಿದ್ದರು.

ಶ್ಯಾಮಲಾತಾಲ್‌ನಲ್ಲಿ ಎರಡು ವಿದೇಶೀ ಪತ್ರಗಳು ವಿರಜಾನಂದರಿಗಾಗಿ ಕಾಯುತ್ತಿದ್ದವು. ಅದನ್ನು ಮದರ್ ಸೇವಿಯರ್ ಅವರ ಸೋದರನ ಮಗಳಾದ ಮಿಸ್ ಕಾನ್‌ಸ್ಟೆಂನ್ಸ್ ಮಿಶೆಲ್ ಬರೆದಿದ್ದರು. ಅಕ್ಟೋಬರ್ ೧೮ರ ಪತ್ರದಲ್ಲಿ ಮದರ್ ತುಂಬ ಕಠಿಣ ಕಾಯಿಲೆಗೊಳಗಾಗಿರುವ ಸುದ್ದಿಯಿತ್ತು. ೨೪ನೇ ಅಕ್ಟೋಬರ್‌ನಲ್ಲಿ ಬರೆದ ಮತ್ತೊಂದು ಪತ್ರದಲ್ಲಿ, ೨೦ನೇ ಅಕ್ಟೋಬರ್ ಮದರ್ ಸೇವಿಯರ್‌ರವರ ದೇಹತ್ಯಾಗವಾಯಿತೆಂಬ ಸುದ್ದಿಇತ್ತು. ಮೃತ್ಯುವಿನ ಹತ್ತು ನಿಮಿಷದ ಹಿಂದೆಯೂ ಸಹ ಅವರು ಪ್ರಜ್ಞೆಯಿಂದಿದ್ದರು. ಬಹಳ ಶಾಂತಿಯಿಂದಲೇ ಅವರು ಕೊನೆಯುಸಿರೆಳೆದಿದ್ದರು. ಮದರ್ ಸೇವಿಯರ್ ಅವರ ನೆನಪಿನಲ್ಲಿ ಡಿಸೆಂಬರ್ ೬ರಂದು ಶ್ಯಾಮಲಾತಾಲ್‌ನ ಗ್ರಾಮವಾಸಿಗಳಿಗೆಲ್ಲ ವಿರಜಾನಂದರು ಊಟ ಹಾಕಿಸಿದರು. ೧೪ ವರ್ಷಗಳ ಹಿಂದೆ ಈ ವಿದೇಶಿ ನಾರಿಯೇ ಶ್ಯಾಮಲ ಅರಣ್ಯ ಛಾಯೆಯಲ್ಲಿ ಶಾಂತಿ ನಿಲಯವಾದ ಶ್ಯಾಮಲಾತಾಲ್‌ನ ಆಶ್ರಮವನ್ನು ಹುಟ್ಟು ಹಾಕಿದ್ದರು. ಅಲ್ಲಿ ಹತ್ತು ತಿಂಗಳು ವಾಸವಾಗಿದ್ದು, ಅಲ್ಲಿಯ ಬಡ ಪಹಾಡಿ ಆಬಾಲವೃದ್ಧ-ವನಿತೆಯರೊಡನೆ ತಾದಾತ್ಮ್ಯಭಾವದಲ್ಲಿ ಬೆರೆತು, ಅವರ ಸುಖ-ದುಃಖದಲ್ಲಿ ಪಾಲ್ಗೊಂಡು ಅವರೆಲ್ಲರ ಮನ ಗೆದ್ದಿದ್ದರು. ಪಹಾಡಿಗಳೂ ಸಹ ಇವರನ್ನು ಮರೆತಿರಲಿಲ್ಲ. ಆಗ ಚಿಕ್ಕವರಾಗಿದ್ದವರೆಲ್ಲ ಈಗ ಬೆಳೆದಿದ್ದಾರೆ. ಅವರಿಗೆಲ್ಲ ಮದರ್ ಅವರ ಮಾತೃಸ್ನೇಹ ಬಹಳವಾಗಿಯೇ ನೆನಪಾಗುತ್ತಿತ್ತು. ಶ್ಯಾಮಲಾತಾಲ್‌ನಲ್ಲಿ ನಡೆದಂತೆ ಮಾಯಾವತಿಯಲ್ಲೂ ಸಹ ಅಕ್ಕಪಕ್ಕದ ಗ್ರಾಮವಾಸಿಗಳಿಗೆ ಡಿಸೆಂಬರ್ ೧೨ ರಂದು ಮಿಸೆಸ್ ಸೇವಿಯರ್ ಸ್ಮರಣಾರ್ಥವಾಗಿ ಭೋಜನ ನೀಡಲಾಗಿತ್ತು. ಮಾಯಾವತಿಯ ಅದ್ವೈತ ಆಶ್ರಮದ ಆಗಿನ ಅಧ್ಯಕ್ಷ ರಾಗಿದ್ದ ಸ್ವಾಮಿ ವೀರೇಶ್ವರಾನಂದರು ಮದರ್ ಸೇವಿಯರ್ ಅವರ ಕೆಲವು ಫೋಟೋ ಕಳುಹಿಸಬೇಕೆಂದು ಮತ್ತು ಅವರ ಜೀವನಕ್ಕೆ ಸಂಬಂಧಿಸಿದಂತೆ ಕೆಲವು ವಿಷಯಗಳನ್ನೂ ಸಹ ಸಂಗ್ರಹಿಸಿ ಕಳುಹಿಸಬೇಕೆಂದು ಕೇಳಿಕೊಂಡು ಸ್ವಾಮಿ ವಿರಜಾನಂದರಿಗೆ ಕೊಲ್ಕತ್ತೆಯಿಂದ ತಂತಿ ಕಳುಹಿಸಿದ್ದರು. ಏಕೆಂದರೆ ಮದರ್ ಸೇವಿಯರ್ ಬಗ್ಗೆ ಒಂದು ಸಣ್ಣ ಪುಸ್ತಿಕೆಯನ್ನು ಹೊರತರಬೇಕೆಂದಿದ್ದರು. ಅವರ ಕೋರಿಕೆಯಂತೆ ವಿರಜಾನಂದರು ಎಲ್ಲವನ್ನೂ ಕಳುಹಿಸಿಕೊಟ್ಟರು. ಅಲ್ಲದೆ ೧೯೧೯ರಲ್ಲಿ ಮದರ್ ಸೇವಿಯರ್ ಜನ್ಮದಿನದ ಸ್ಮರಣೆಗಾಗಿ ಬರೆದಿದ್ದ ಕವಿತೆಯೊಂದನ್ನೂ ಸಹ 'ಪ್ರಬುದ್ಧ ಭಾರತ'ದಲ್ಲಿ ಮುದ್ರಿಸುವ ಸಲುವಾಗಿ ಕಳುಹಿಸಿಕೊಟ್ಟರು.

ಆ ವರ್ಷ ಶ್ರೀಮಾತೆಯವರ ಜನ್ಮದಿನ ಡಿಸೆಂಬರ್ ೧೨ರಂದು ಬಂದಿತ್ತು. ಶ್ರೀಮಾತೆಯವರಿಗೆ ನಿವೇದಿಸಲೆಂದು ಹಿಂದಿನ ದಿನವೆಲ್ಲ ಕುಳಿತು 'ಚಂದ್ರಪುಲಿ' ಎಂಬ ಸಿಹಿತಿಂಡಿಯನ್ನು ವಿರಜಾನಂದರು ತಯಾರಿಸಿದರು. ಉತ್ಸವದ ದಿನವನ್ನು ಹಿಮಾಲಯದ ಆ ನಿರ್ಜನ ಆಶ್ರಮದಲ್ಲಿ ಸ್ಮರಣೆ-ಮನನ-ಭಜನೆಯೊಂದಿಗೆ ಆನಂದದಿಂದ ಕಳೆದರು.

* * * *

೧೯೩೧ ಹಾಗೂ ೧೯೩೨ರಲ್ಲಿಯೂ ಸಹ ವಿರಜಾನಂದರಿಗೆ ಪರ್ವತಗಳನ್ನು ಬಿಟ್ಟು ಕೆಳಗಿಳಿದು ಬರಬೇಕಾಗಿರಲಿಲ್ಲ. ಅವರ ದಿನಗಳು ಬಹುಪಾಲು ಶ್ಯಾಮಲಾತಾಲ್‌ನಲ್ಲೂ ಸ್ವಲ್ಪ ಭಾಗ ಮಾಯಾವತಿಯಲ್ಲೂ ಕಳೆದವು. ಇವರು ಮಠ ಮತ್ತು ಮಿಷನ್ನಿನ ಟ್ರಸ್ಟಿಗಳಾದ್ದರಿಂದ ಕೆಲವು ಬಾರಿ ಕಾನೂನಿಗೆ ಸಂಬಂಧಿಸಿದ ಕೆಲಸಗಳ ಮೇರೆಗೆ ಮಹಾಕುಮಾ ನಗರಕ್ಕೂ, ಲೋಹಾಘಾಟಿಗೂ ಹೋಗಬೇಕಾಗಿ ಬರುತ್ತಿತ್ತು. ೧೯೩೧ರ ಮೇ ತಿಂಗಳಲ್ಲಿ ಶ್ಯಾಮಲಾತಾಲ್‌ನ ಮೆಚ್ಚಿನ ಕರ್ಮಠ ನರೇನ್‌ನ (ಸ್ವಾಮಿ ಮಹಾನಂದ) ದೇಹತ್ಯಾಗವಾಯಿತು. ಇದರಿಂದಾಗಿ ಆಶ್ರಮದ ನಾನಾ ಕೆಲಸಗಳನ್ನು ವಿರಜಾನಂದರೊಬ್ಬರೇ ನಡೆಸಿಕೊಂಡು ಹೋಗಬೇಕಾಗಿ ಬಂತು. ಆದರೆ ಅವರು ಈ ಕೆಲಸವನ್ನು ಪರಿಶ್ರಮವೆಂದು ಪರಿಗಣಿಸುತ್ತಿರಲಿಲ್ಲ.[೧]

೧೯೩೨ರಲ್ಲಿ ಕಂಖಲ್ ಸೇವಾಶ್ರಮದ ಅಧ್ಯಕ್ಷರೂ ಗುರುಭ್ರಾತರೂ ಆದ ಸ್ವಾಮಿ ಕಲ್ಯಾಣಾನಂದರು ಮಾಯಾವತಿಗೆ ಹೋಗುವಾಗ ದಾರಿಯಲ್ಲಿ ಶ್ಯಾಮಲಾತಾಲ್‌ಗೂ ಬಂದು ಆಶ್ರಮವನ್ನು ನೋಡಿಕೊಂಡು ಹೋದರು. ಅವರು ಕೆಲವು ತಿಂಗಳು ಮಾಯಾವತಿಯಲ್ಲಿದ್ದರು. ಇವರು ಮಾಯಾವತಿಯಲ್ಲಿ ಇದ್ದ ಸಮಯದಲ್ಲಿ ವಿರಜಾನಂದರೂ ಸಹ ಅಲ್ಲಿಗೆ ಹೋಗಿ ಕೆಲವು ದಿನಗಳನ್ನು ಕಳೆದಿದ್ದರು. ನವೆಂಬರ್ ತಿಂಗಳಲ್ಲಿ ಇಬ್ಬರೂ ಒಟ್ಟಿಗೆ ಕೆಳಗಿಳಿದರು! ಇವರೊಂದಿಗೆ ಮಾಯಾವತಿ ಅದ್ವೈತ ಆಶ್ರಮದ ಆಗಿನ ಅಧ್ಯಕ್ಷರಾದ ಸ್ವಾಮಿ ವೀರೇಶ್ವರಾನಂದರೂ 'ಪ್ರಬುದ್ಧ ಭಾರತ' ಪತ್ರಿಕೆಯ ಸಂಪಾದಕರಾದ ಸ್ವಾಮಿ ಪವಿತ್ರಾನಂದರೂ ಸಹ ಇದ್ದರು. ವಿರಜಾನಂದರು ಕಾಲ್ನಡಿಗೆಯಲ್ಲೇ ಬರಲು ತುಂಬ ಇಚ್ಛಿಸಿದ್ದರು. ಆದರೆ ಇವರೆಲ್ಲರ ಬಲವಂತಕ್ಕೆ ಮಣಿದು ಕುದುರೆಯ ಬೆನ್ನೇರಿದರು.

ಮಾಸ್ಟರ್ ಮಹಾಶಯರು ಕೊಲ್ಕತ್ತೆಯಲ್ಲಿ ಜೂನ್ ೪ರಂದು ಹಾಗೂ ಪೂಜ್ಯರಾದ ಸ್ವಾಮಿ ಸುಬೋಧಾನಂದರು ಬೇಲೂರು ಮಠದಲ್ಲಿ ಡಿಸೆಂಬರ್ ೨ರಂದು ದೇಹತ್ಯಾಗ ಮಾಡಿದರೆಂಬ

---

೧ ಸ್ವಂತ ಜವಾಬ್ದಾರಿಯ ಮೇಲೆ ಬೇರೆಯೇ ಆದಂತಹ (ಸ್ವತಂತ್ರವಾದ) ಆಶ್ರಮದ ಸ್ಥಾಪನೆಯು ಖಂಡಿತವಾಗಿಯೂ ಸುಖಕರವಲ್ಲವೆಂದು ವಿರಜಾನಂದರಿಗೆ ಆಗಾಗ ಅನ್ನಿಸುತ್ತಿತ್ತು . ಸಾಧನೆಯೇ ಮೂಲ ಲಕ್ಷ್ಯವಾಗಿದ್ದರೂ ಆಶ್ರಮದ ಚಾಲನೆಗಾಗಿ ಅಗತ್ಯವಾಗಿ ಬರುವ ಆರ್ಥಿಕ ಜಂಜಡಗಳು ಚಿತ್ತವನ್ನು ವಿಕ್ಷಿಪ್ತಗೊಳಿಸುತ್ತವೆ ಎಂಬುದರಲ್ಲಿ ವಿರಜಾನಂದರಿಗೆ ಸಂದೇಹವಿರಲಿಲ್ಲ. ಮುಂದೊಮ್ಮೆ ಹಿರಿಯ ಭಕ್ತರೊಬ್ಬರು ಕೆಲಸದಿಂದ ನಿವೃತ್ತಿಯನ್ನು ಪಡೆದು ಸಾಧನೆ ಮಾಡುವ ಉದ್ದೇಶದಿಂದ ಆಶ್ರಮವೊಂದನ್ನು ಸ್ಥಾಪಿಸಿದಾಗ ವಿರಜಾನಂದರು ಅವರಿಗೆ ತಾವು ಶ್ಯಾಮಲಾತಾಲ್ ಆಶ್ರಮದಿಂದಾಗಿ ಎಷ್ಟೊಂದು ರೀತಿಯಲ್ಲಿ ತೊಂದರೆಗೆ ಒಳಗಾಗಬೇಕಾಯಿತೆಂಬುದನ್ನು ವಿಶದಪಡಿಸಿ, ಯಾವುದೇ ಕಾರಣಕ್ಕೂ ಆಶ್ರಮದ ಕಾರ್ಯಪರಿಧಿಯನ್ನು ವಿಸ್ತರಿಸಲು ಪ್ರಯತ್ನಿಸಬೇಡ ಎಂಬ ಎಚ್ಚರಿಕೆಯನ್ನು ನೀಡಿದ್ದರು.

ದುಃಖದ ವಾರ್ತೆಯನ್ನು ವಿರಜಾನಂದರು ಶ್ಯಾಮಲಾತಾಲ್‌ನಲ್ಲಿದ್ದಾಗ ಕೇಳಿದರು. ತಾವು ಯೌವನದ ಹೊಸ್ತಿಲಲ್ಲಿದ್ದಾಗ ಮಾಸ್ಟರ್ ಮಹಾಶಯರಿಂದ ತಮ್ಮ ತ್ಯಾಗಜೀವನಕ್ಕೆ ಸಿಕ್ಕ ಪ್ರೇರಣೆಯನ್ನು ವಿರಜಾನಂದರು ಎಂದೂ ಮರೆತಿರಲಿಲ್ಲ.

೧೯೩೩ರ ಏಪ್ರಿಲ್ ತಿಂಗಳಲ್ಲಿ ಮಠಾಧ್ಯಕ್ಷರಾದ ಸ್ವಾಮಿ ಶಿವಾನಂದರು ಪಾರ್ಶ್ವವಾಯುವಿನಿಂದ ಆಕ್ರಾಂತರಾಗಿರುವರೆಂಬ ವಿಷಾದದ ಸುದ್ದಿ ಬಂತು. ಮಾತು ನಿಂತುಹೋಗಿತ್ತು ಹಾಗೂ ಅವರ ದೇಹದ ಬಲಭಾಗವು ಸ್ವಾಧೀನ ಕಳೆದುಕೊಂಡಿತ್ತು. ರಾಮಕೃಷ್ಣ ಮಠ ಹಾಗೂ ಮಿಷನ್ನಿನ ಸಾಧು ಮತ್ತು ಭಕ್ತರ ಮನಸ್ಸು ಚಿಂತೆಯೆಂಬ ಘನಮೇಘದಿಂದ ಆಚ್ಛಾದಿಸಲ್ಪಟ್ಟಿತ್ತು. ಹತ್ತು ತಿಂಗಳ ಕಾಲ ಅವರ ಆರೋಗ್ಯವು ಉನ್ನತಿ-ಅವನತಿಗಳ ನಡುವೆ ಹೊಯ್ದಾಡುತ್ತಿತ್ತು. ೧೯೩೪ರ ಫೆಬ್ರವರಿ ೨೦ರಂದು ತಮ್ಮ ೮೦ನೇ ವಯಸ್ಸಿನಲ್ಲಿ ಸ್ವಾಮಿ ಶಿವಾನಂದರು ಮಹಾಸಮಾಧಿಯನ್ನಪ್ಪಿದರು. ಆ ಸಮಯದಲ್ಲಿ ಶ್ಯಾಮಲಾತಾಲ್‌ನಲ್ಲಿದ್ದ ಸ್ವಾಮಿ ವಿರಜಾನಂದರು ಈ ಸಮಾಚಾರವನ್ನು ಪಡೆದು ಬೇಲೂರು ಮಠಕ್ಕೆ ಬಂದರು. ಸ್ವಾಮಿ ಶಿವಾನಂದರು ಸುದೀರ್ಘ ಹನ್ನೆರಡು ವರ್ಷಗಳ ಕಾಲ ತಮ್ಮ ಜ್ಞಾನ-ವೈರಾಗ್ಯ-ಪ್ರೇಮ ಮಂಡಿತ ಉನ್ನತ ಆಧ್ಯಾತ್ಮಿಕ ವ್ಯಕ್ತಿತ್ವದ ಮೂಲಕ ಶ್ರೀರಾಮಕೃಷ್ಣ ಸಂಘದ ನೂರಾರು ತ್ಯಾಗಿಗಳಿಗೆ ಮತ್ತು ಗೃಹಸ್ಥರಿಗೆ ಲೌಕಿಕ ಮತ್ತು ಪಾರಮಾರ್ಥಿಕ ವಿಷಯದಲ್ಲಿ ಮಾರ್ಗದರ್ಶನ ತೋರುತ್ತ, ಬರಿದಾಗದ ಉತ್ಸಾಹವನ್ನಿತ್ತಿದ್ದರು. ಇಂತಹ ಮಹಾ ವ್ಯಕ್ತಿತ್ವವು ಕಣ್ಮರೆಯಾದ್ದರಿಂದ ಸಂಘದ ಸಮತೋಲನವು ಸ್ವಲ್ಪ ಏರುಪೇರಾಗುವುದೆಂಬುದು ಸರ್ವವಿದಿತವಾಗಿತ್ತು. ಮಹಾಪುರುಷ ಮಹಾರಾಜರೊಂದಿಗೆ ಒಂದು ಯುಗವೇ ಕೊನೆಗೊಂಡಂತಾಗಿತ್ತು.

೧೬

ಮಹಾಪುರುಷರಾದ ಸ್ವಾಮಿ ಶಿವಾನಂದರ ಮಹಾಸಮಾಧಿಯ ನಂತರ ಸ್ವಾಮಿ ಅಖಂಡಾನಂದರು ಹೊಸ ಅಧ್ಯಕ್ಷರಾಗಿ ನೇಮಕಗೊಂಡರು. ಸ್ವಾಮಿ ಶುದ್ಧಾನಂದರು ಅಷ್ಟು ಹೊತ್ತಿಗಾಗಲೇ ಮಠ ಹಾಗೂ ಮಿಷನ್ನಿನ ಸೆಕ್ರೆಟರಿ ಸ್ಥಾನದಲ್ಲಿದ್ದು, ದಕ್ಷತೆಯಿಂದ ಆರೂವರೆ ವರ್ಷಗಳ ಕಾಲ ದುಡಿದು ಬಳಲಿದ್ದರು. ವಿಧಾತನ ಕಟ್ಟಳೆಯಂತೆ ಈಗ ವಿರಜಾನಂದರು ಶುದ್ಧಾನಂದರ ಜವಾಬ್ದಾರಿಯನ್ನು ಹೊರಬೇಕಾಯಿತು. 'ರೆಕ್ಕೆಯಿಲ್ಲದ ವಿಹಂಗಮವೇ ಕೇಳು, ನೀನು ತಪ್ಪಿಸಿಕೊಳ್ಳುವ ದಾರಿಯಲ್ಲವಿದು' ಎಂಬ ಸ್ವಾಮೀಜಿಯ ಕವಿತೆಯ ಚರಣವೊಂದು ವಿರಜಾನಂದರಿಗೆ ನೆನಪಿಗೆ ಬಂತು; ಕ್ಷೋಭೆಗೊಳಗಾಗದೆ ಹೊಸ ಜವಾಬ್ದಾರಿಯಲ್ಲಿ ತಮ್ಮನ್ನು ತೊಡಗಿಸಿಕೊಂಡರು.

೧೯೩೫ರ ಪ್ರಾರಂಭದಲ್ಲಿ ಸ್ವಾಮಿ ವಿರಜಾನಂದರಿಗೆ ಹೃದಯದ ದುರ್ಬಲತೆ ಕಾಣಿಸಿಕೊಂಡಿತು. ಚಿಕಿತ್ಸಕರೇನೋ ಔಷಧಿ-ಪಥ್ಯವನ್ನು ತಿಳಿಸಿದರಾದರೂ ವಿರಜಾನಂದರಿಗೆ ಅದನ್ನು ಯಥಾವತ್ತಾಗಿ ಪಾಲಿಸಲಾಗುತ್ತಿರಲಿಲ್ಲ, ಅವರದಕ್ಕೆ ಗುರುತ್ವವನ್ನೂ ಕೊಡುತ್ತಿರಲಿಲ್ಲ. ಏಪ್ರಿಲ್‌ನಲ್ಲಿ ವಿವಿಧ ಶಾಖಾಕೇಂದ್ರಗಳ ಅಧ್ಯಕ್ಷರುಗಳ ಸಮ್ಮೇಳನವಿತ್ತು; ಇದರಲ್ಲಿ ವಿರಜಾನಂದರು ವಿಶೇಷ ಪಾತ್ರವನ್ನು ವಹಿಸಬೇಕಾಯಿತು. ಇದಾದ ನಂತರ ಆರು ತಿಂಗಳ ರಜೆಯನ್ನು ಪಡೆದು ವಿರಜಾನಂದರು ಶುದ್ಧಾನಂದರೊಂದಿಗೆ ಮೇ ೨ ರಂದು ಶ್ಯಾಮಲಾತಾಲ್‌ಗೆ ಹೊರಟರು. ನವೆಂಬರ್‌ನಲ್ಲಿ ಹಿಂತಿರುಗಿ ಬಂದು ಮತ್ತೆ ಸೆಕ್ರೆಟರಿ ಕೆಲಸವನ್ನು ವಹಿಸಿಕೊಂಡರು. ೧೯೩೬ರಲ್ಲೊಮ್ಮೆ ಕೆಲದಿನಗಳ ಮಟ್ಟಿಗೆ ರಾಂಚಿಗೆ ಹೋಗಿ ಬಂದರು.

ಫ್ರೆಂಚ್ ಚಿಂತಕರಾದ ರೋಮಾ ರೋಲಾ ಎಂಬವರು ಶ್ರೀರಾಮಕೃಷ್ಣರ ಹಾಗೂ ಸ್ವಾಮಿ ವಿವೇಕಾನಂದರ ಜೀವನ ಚರಿತ್ರೆಯನ್ನು ಬರೆದು ಈ ಯುಗಪುರುಷರಿಬ್ಬರನ್ನೂ ಪಾಶ್ಚಾತ್ಯ ಜಗತ್ತಿಗೆ ಪರಿಚಯಿಸಿದ್ದರು. ಇದರಿಂದಾಗಿ ಶ್ರೀರಾಮಕೃಷ್ಣರ ಭಕ್ತಸಮಾಜಕ್ಕೆ ರೋಮಾ ರೋಲಾರ ಬಗ್ಗೆ ಆಳವಾದ ಕೃತಜ್ಞತಾ ಭಾವವಿರುವುದು ಸಹಜವಾದದ್ದು. ಸ್ವಾಮಿ ವಿರಜಾನಂದರು ನಡೆಸಿಕೊಟ್ಟ ೧೯೩೬ರ ಜನವರಿ ೨೫ರ ಸಂನ್ಯಾಸಿಗಳ ಸಭೆಯಲ್ಲಿ ರೋಮಾ ರೋಲಾರವರ ೭೦ನೇ ಜನ್ಮದಿನಕ್ಕೆ ಸಂಘದ ಪರವಾಗಿ ಅಭಿನಂದನೆಗಳನ್ನು ಕಳುಹಿಸಬೇಕೆಂದು ತೀರ್ಮಾನಿಸಲಾಯಿತು.

ಭಗವಾನ್ ಶ್ರೀರಾಮಕೃಷ್ಣರ ಜನ್ಮ ಶತಮಾನೋತ್ಸವವು ಈ ವರ್ಷದಿಂದ (೧೯೩೬) ಪ್ರಾರಂಭವಾಗುವುದರಲ್ಲಿತ್ತು. ಅದಕ್ಕಾಗಿ ಸಿದ್ಧತೆಗಳು ನಡೆಯುತ್ತಿದ್ದವು. ಸ್ವಾಮಿ ವಿವೇಕಾನಂದರಿಂದ ಪರಿಕಲ್ಪಿತವಾದ ಶ್ರೀರಾಮಕೃಷ್ಣ ಮಂದಿರದ ನಿರ್ಮಾಣವು ಈಗಾಗಲೇ ಪ್ರಾರಂಭವಾಗಿತ್ತು (೧೯೩೪ರ ಕೊನೆಭಾಗದಲ್ಲಿ). ಮಠದ ಅಧ್ಯಕ್ಷರಾದ ಸ್ವಾಮಿ ಅಖಂಡಾನಂದರು ಸಾರಗಾಛಿ ಆಶ್ರಮದಲ್ಲೇ ಇದ್ದರು. ಅವರದು ಬಾಲಸ್ವಭಾವ. ಹಳ್ಳಿಯ ವಾತಾವರಣವೇ ಅವರಿಗಿಷ್ಟ. ಆದರೆ ಶತಮಾನೋತ್ಸವದ ಉದ್ಘಾಟನೆಯ ಶುಭ ಸಂದರ್ಭದಲ್ಲಿ ಅವರ ಉಪಸ್ಥಿತಿಯು ಬಹಳ ಅಗತ್ಯವಿತ್ತು. ಆದ್ದರಿಂದ ಅವರನ್ನೊಪ್ಪಿಸಿ ಬೇಲೂರು ಮಠಕ್ಕೆ ಕರೆತರಲು ವಿರಜಾನಂದರು ಮತ್ತಿಬ್ಬರು ಹಿರಿಯ ಸಂನ್ಯಾಸಿಗಳನ್ನು ಕರೆದುಕೊಂಡು ಸಾರಗಾಛಿಗೆ ಹೊರಟರು. ಇವರೆಲ್ಲರನ್ನು ನೋಡಿ ಶಿಶುಸ್ವಭಾವ ಮುಗ್ಧರಾದ ಅಖಂಡಾನಂದರಿಗೆ ಬಲು ಖುಷಿ. ಹಾಗಾಗಿ ಅವರನ್ನೊಪ್ಪಿಸಿ ಬೇಲೂರಿಗೆ ಕರೆತರಲು ಹೆಚ್ಚು ಕಷ್ಟಪಡಬೇಕಾಗಲಿಲ್ಲ.

೧೯೩೬ರ ಫೆಬ್ರವರಿ ೨೪ರಂದು ಶ್ರೀರಾಮಕೃಷ್ಣರ ಜಯಂತಿ. ಅಂದೇ ಜನ್ಮಶತಮಾನೋತ್ಸವದ ಶುಭಾರಂಭ. ಅಂದಿನ ದಿನ ಇಡೀ ಕಾರ್ಯಕ್ರಮಗಳು, ವಿಶೇಷ ಪೂಜೆ, ಪಠಣ, ಭಜನೆ, ಸಂಕೀರ್ತನೆಗಳಿಂದ ಇಡೀ ಮಠವು ಸಂಭ್ರಮದಿಂದ ಕೂಡಿತ್ತು. ಒಂಬತ್ತು ಗಂಟೆಯ ಹೊತ್ತಿಗೆ ವಿರಾಟ್ ಹೋಮವು ಪ್ರಾರಂಭವಾಯಿತು. ಸುಪ್ರಸಿದ್ಧ ಗಾಯಕರು ಹಾಗೂ ವಾದಕರು ಐದು ಗಂಟೆಗಳ ಕಾಲ ಅತ್ಯುತ್ಕೃಷ್ಟವಾದ ಭಾರತೀಯ ಸಂಗೀತದ ಹೊನಲನ್ನೇ ಹರಿಸಿದರು. ಮಠದ ವಿಶಾಲ ಮೈದಾನದ ಮಧ್ಯಭಾಗದಲ್ಲಿ ಕೃತಕ ಪರ್ವತ, ಝರಿ ಮುಂತಾದವುಗಳನ್ನು ನಿರ್ಮಿಸಿ, ನಯನ ಮನೋಹರವಾದ ಮಂಟಪವೊಂದರಲ್ಲಿ ಶ್ರೀರಾಮಕೃಷ್ಣರ ಬೃಹತ್ ಪ್ರತಿಕೃತಿಯೊಂದನ್ನಿಟ್ಟು, ಅದನ್ನು ಪುಷ್ಪಮಾಲೆಗಳಿಂದ ಅಲಂಕರಿಸಲಾಗಿತ್ತು. ಇಲ್ಲಿ ದೇವೀ ಸಂಕೀರ್ತನೆಗಳನ್ನು ಹಾಡು

ತ್ತಿದ್ದರು. ಜಾತಿಧರ್ಮಗಳ ಎಲ್ಲೆಗಳನ್ನು ಒಡೆದುಹಾಕಿ ಸಾವಿರಾರು ಸ್ತ್ರೀಪುರುಷರು ಈ ಉತ್ಸವದಲ್ಲಿ ಪಾಲ್ಗೊಂಡಿದ್ದರು. ಶ್ರೀರಾಮಕೃಷ್ಣರ ಜೀವನ ಹಾಗೂ ಉಪದೇಶಗಳನ್ನೊಳಗೊಂಡ ಕಿರು ಪುಸ್ತಿಕೆಗಳನ್ನು ಜನಸಾಮಾನ್ಯರಿಗೆ ಹಂಚಲಾಗುತ್ತಿತ್ತು. ಕೊಲ್ಕತ್ತೆಯ ಬಾನುಲಿಯು ಈ ಸಂದರ್ಭದಲ್ಲಿ ವಿಶೇಷ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು. ಬೆಳಗ್ಗೆ ೭-೧೫ಕ್ಕೆ ಶ್ರೀರಾಮಕೃಷ್ಣರ ಬಗ್ಗೆ ಸ್ವಾಮಿ ವಿವೇಕಾನಂದರು ಹೇಳಿದ ಮಾತುಗಳನ್ನು ಹಾಗೂ ರಾಮಕೃಷ್ಣ ಸಂಘದ ಅಧ್ಯಕ್ಷರಾದ ಶ್ರೀಮತ್ ಸ್ವಾಮಿ ಅಖಂಡಾನಂದರ ಸಂದೇಶಗಳನ್ನು ಬಿತ್ತರಿಸಿದರು. ಹಾಗೂ ಸಂಜೆ ೬ ಗಂಟೆಯಿಂದ ವೇದಘೋಷವನ್ನೂ 'ಯುಗಾವತಾರ್ ಶ್ರೀರಾಮಕೃಷ್ಣ' ಎಂಬ ನಾಟಕವನ್ನೂ ಪ್ರಸಾರ ಮಾಡಿತು. ಅಂದು ಸಂಜೆ ೪ ಗಂಟೆಗೆ ದೊಡ್ಡದೊಂದು ಸಭೆ ಸೇರಿತ್ತು. ಸ್ವಾಮಿ ಶುದ್ಧಾನಂದರು ಅದರ ಅಧ್ಯಕ್ಷರಾಗಿದ್ದರು. ನ್ಯಾಯಾಧೀಶರಾದ ಸರ್ ಮನ್ಮಥನಾಥ ಮುಖ್ಯೋಪಾಧ್ಯಾಯ, ಡಾಕ್ಟರ್ ವೇಣೀಮಾಧವ ಬಡುವಾ, ಡಾ. ಪ್ರಫುಲ್ಲ ಚಂದ್ರ ಘೋಷ್, ಶ್ರೀ ಪ್ರಫುಲ್ಲಚಂದ್ರ ಸರಕಾರ್, ಅಧ್ಯಾಪಕರಾದ ನೃಪೇಂದ್ರನಾಥ್ ವಂದ್ಯೋಪಾಧ್ಯಾಯ, ರಾಯ್ ಖಗೇಂದ್ರನಾಥ ಬಹಾದೂರ್, ಸತ್ಯೇಂದ್ರನಾಥ್ ಮಜುಮ್ದಾರ್ ಹಾಗೂ ಡಾ. ಕಾಲೀದಾಸ್ ನಾಗ್ ಮುಂತಾದ ಮಹಾನ್ ಚಿಂತಕರು ಈ ಸಭೆಯಲ್ಲಿ ಭಾಗವಹಿಸಿದ್ದರು.

ಫೆಬ್ರವರಿ ೨೬ರಂದು ವಿರಜಾನಂದರು ಮಠದ ಹಲವು ಸಂನ್ಯಾಸಿ, ಬ್ರಹ್ಮಚಾರಿಗಳೊಡನೆ ಶ್ರೀರಾಮಕೃಷ್ಣರ ಪುಣ್ಯಸ್ಮೃತಿಯಿಂದ ಕೂಡಿದ ಕಾಶೀಪುರದ ಉದ್ಯಾನಗೃಹ, ಕಾಶೀಪುರದ ಸ್ಮಶಾನ ಹಾಗೂ ದಕ್ಷಿಣೇಶ್ವರಕ್ಕೆ 'ತೀರ್ಥಯಾತ್ರೆ' ಮಾಡಿದರು. ಇದೇ ದಿನ ಸಂಜೆ ೫.೩೦ಕ್ಕೆ ಕೊಲ್ಕತ್ತೆಯ ಟೌನ್‌ಹಾಲ್‌ನಲ್ಲಿ ಆಯೋಜಿತವಾಗಿದ್ದ ಬೃಹತ್ ಸಭೆಯಲ್ಲಿಯೂ ವಿರಜಾನಂದರು ಪಾಲ್ಗೊಂಡರು. ಈ ಸಭೆಯ ಅಧ್ಯಕ್ಷತೆಯನ್ನು 'ಸಂತೋಷ್' ಎಂಬ ಸ್ಥಳದ ರಾಜನಾದ ಸರ್ ಮನ್ಮಥನಾಥ್ ರಾಯ್ ಚೌಧುರಿಯವರು ವಹಿಸಿದ್ದರು. ಪೂಜ್ಯ ಸ್ವಾಮಿ ಅಭೇದಾನಂದರು, ಶ್ರೀಯುತ ರಾಮಾನಂದ ಚಟ್ಟೋಪಾಧ್ಯಾಯರು, ಜೆ. ಆರ್. ವಂದ್ಯೋಪಾಧ್ಯಾಯರು, ನ್ಯಾಯಾಧೀಶರಾದ ಸರ್ ಮನ್ಮಥನಾಥ ಮುಖ್ಯೋಪಾಧ್ಯಾಯ ಹಾಗೂ ದಿವಾನ್ ಬಹಾದೂರ್ ರಾಮಸ್ವಾಮಿ ಮೊದಲಿಯಾರ್‌ರವರು ಭಾಷಣಗಳನ್ನು ಮಾಡಿದರು. ರಾಮಾನಂದ ಚಟ್ಟೋಪಾಧ್ಯಾಯರು ತಮ್ಮ ಭಾಷಣದಲ್ಲಿ, ''ಭಾರತವರ್ಷವು ಸಾಹಿತ್ಯ, ಕಲೆ, ದರ್ಶನಾದಿ ಶಾಸ್ತ್ರ ವಿಜ್ಞಾನ ಮುಂತಾದವುಗಳಲ್ಲಿ ಸಾಧನೆ ನಡೆಸಿದೆ. ದೇಶವಿದೇಶಗಳಲ್ಲಿ ತನ್ನ ಸಾಮ್ರಾಜ್ಯ ಸ್ಥಾಪಿಸಿ ಸಂಸ್ಕೃತಿಯನ್ನು ಹರಡಿದೆ. ಆದರೂ ಸಹ ನಮ್ಮ ಭಾರತದ ಚರಮ ಸಂಪತ್ತು ಚಿರಕಾಲದಿಂದಲೂ ಆಧ್ಯಾತ್ಮಿಕತೆಯೇ ಆಗಿದೆ. ಇದನ್ನು ಮನಸ್ಸಿನಲ್ಲಿಟ್ಟುಕೊಂಡು ಹೇಳುವುದಾದರೆ, ಶ್ರೀರಾಮಕೃಷ್ಣರ ಜನ್ಮ ಶತಮಾನೋತ್ಸವವೇ ಭಾರತದ ಈ ವರ್ಷದ ಸರ್ವಶ್ರೇಷ್ಠ ಘಟನೆ ಎಂದು ಹೇಳಬಹುದಾಗಿದೆ'' ಎಂದರು.

ಅಧ್ಯಕ್ಷತೆ ವಹಿಸಿದ್ದ ಜ್ಞಾನರಂಜನ ವಂದ್ಯೋಪಾಧ್ಯಾಯರು ಮಾತನಾಡುತ್ತ ಹೀಗೆ ಹೇಳಿದರು: ''ಜನಸಾಮಾನ್ಯರ ಸೇವೆಯೇ ಮನುಷ್ಯನ ಪರಮಧರ್ಮ ಎಂಬ ಸತ್ಯವನ್ನು ಯಾರು ಅರಿತಿರುವರೋ ಅಂಥವರ ಪೈಕಿ ಶ್ರೀರಾಮಕೃಷ್ಣರೂ ಒಬ್ಬರು. ಹಾಗೂ ಈ ಸತ್ಯವು ಅವರ ಶಿಷ್ಯರಲ್ಲಿಯೂ ಸಹ ರೂಪುಗೊಂಡಿದೆ.'' ದಿವಾನ್ ಬಹಾದೂರ್ ರಾಮಸ್ವಾಮಿ ಮೊದಲಿಯಾರ್ ಹೇಳಿದರು, ''ದಕ್ಷಿಣ ಭಾರತದ ತರುಣರಲ್ಲಿ ಯಾವುದೇ ರೀತಿಯ ಪ್ರಾಣ ಸಂಚಾರವಾಗಿದ್ದರೆ ಅದು ಶ್ರೀರಾಮಕೃಷ್ಣ-ವಿವೇಕಾನಂದರ ಸಂದೇಶದಿಂದಲೇ. ಮದ್ರಾಸಿನಲ್ಲಿ ಸ್ವಾಮಿ ವಿವೇಕಾನಂದರು ನೀಡಿದ ಸಂದೇಶವು ಈಗಲೂ ನನ್ನ ಕಿವಿಯಲ್ಲಿ ಮೊಳಗುತ್ತಿದೆ. ಮದ್ರಾಸಿಗಳಾದ ನಾವು ಸ್ವಾಮಿ ವಿವೇಕಾನಂದರ ಮಹತ್ತ್ವವನ್ನು (ಮೊದಲು) ಗುರುತಿಸಿದ್ದೆವು ಎಂಬುದನ್ನು ನೆನೆದು ಹೆಮ್ಮೆಯಾಗುತ್ತಿದೆ. ಈ ದೇವಮಾನವನಿಂದಲೇ ನಾವು ಹಿಂದೂ ಸಭ್ಯತೆಯನ್ನೂ ಹಾಗೂ ಧರ್ಮದ ಆದಿ ಹಾಗೂ ಎಂದಿಗೂ ಬತ್ತದ ಅದರ ಉಗಮಸ್ಥಾನವನ್ನು ಕಂಡುಕೊಂಡಿರುವೆವು. ಇದೇ ಸ್ವಾಮಿ ವಿವೇಕಾನಂದರ ಶ್ರೇಷ್ಠ ಕೊಡುಗೆಯಾಗಿದೆ.''

ಫೆಬ್ರವರಿ ೨೪, ಸೋಮವಾರದಿಂದ ಹಿಡಿದು ಮಾರ್ಚ್ ೧ರವರೆಗೆ ಬೇಲೂರು ಮಠದಲ್ಲಿ ಶ್ರೀರಾಮಕೃಷ್ಣರ ಶತಮಾನೋತ್ಸವದ ಉದ್ಘಾಟನಾ ಸಮಾರಂಭಗಳು ಜರುಗಿದವು. ಮಾರ್ಚ್ ೧೧ರಂದು ಸ್ವಾಮಿ ವಿರಜಾನಂದರು, ಶುದ್ಧಾನಂದರು ಮತ್ತು ಇನ್ನಿತರ ಸಂನ್ಯಾಸಿಗಳೊಡನೆ ಕಾಂಕೂರ್‌ಗಾಛಿ ಯೋಗೋದ್ಯಾನಕ್ಕೆ ಹೋಗಿ ಬಂದರು.

ವಿರಜಾನಂದರು ಎರಡು ವರ್ಷದ ಮೇರೆಗೆ ಸೆಕ್ರೆಟರಿ ಸ್ಥಾನವನ್ನು ವಹಿಸಿಕೊಂಡಿದ್ದರು. ಮಾರ್ಚ್‌ನ ಕೊನೆಗೆ ಆ ಎರಡು ವರ್ಷಗಳು ಮುಗಿಯುವುದರಲ್ಲಿತ್ತು. ಈ ಜವಾಬ್ದಾರಿಯಿಂದ ಮುಕ್ತರಾಗಲು ವಿರಜಾನಂದರು ತುದಿಗಾಲಲ್ಲಿ ನಿಂತಿದ್ದರು. ಆದರೆ ಸಂಘಾಧ್ಯಕ್ಷರಾದ ಸ್ವಾಮಿ ಅಖಂಡಾನಂದರ ಒತ್ತಾಯದಿಂದಾಗಿ, ಎಷ್ಟೇ ಬೇಡವೆಂದರೂ ಸಹ ವಿರಜಾನಂದರೇ ಮತ್ತೆ ಎರಡು ವರ್ಷಗಳ ಮಟ್ಟಿಗೆ ಸೆಕ್ರೆಟರಿಯಾಗಿ ನೇಮಿಸಲ್ಪಟ್ಟರು. ಕೆಲವು ತಿಂಗಳು ಶ್ಯಾಮಲಾತಾಲ್‌ಗೆ ಹೋಗಿ ವಿಶ್ರಾಂತಿ ಪಡೆದು ಬರಲು ಅನುಮತಿ ಪಡೆದರು. ಜೂನ್ ೪ರಂದು ಹೊರಟು ೧೯೩೭ರ ಜನವರಿ ೩ ರಂದು ಹಿಂತಿರುಗಿದರು. ಶ್ಯಾಮಲಾತಾಲ್‌ನಲ್ಲಿರುವಾಗಲೇ ಜುಲೈ ತಿಂಗಳಲ್ಲಿ ಸ್ವಾಮಿ ಶುದ್ಧಾನಂದರು ಲಘು ಪಾರ್ಶ್ವವಾಯುವಿಗೆ ಒಳಗಾದ್ದಾರೆಂಬ ಸುದ್ದಿಯನ್ನು ಕೇಳಿದ್ದರು. ಹಿಂದಿರುಗಿ ಬರುವಷ್ಟರಲ್ಲಿ ಅವರು ಗುಣಮುಖರಾಗುತ್ತಿರುವುದನ್ನು ಕಂಡು ಸಮಾಧಾನಗೊಂಡರು. ೧೯೩೬ರ ನವೆಂಬರ್‌ನಲ್ಲಿ ಸ್ವಾಮೀಜಿಯವರ ಸಂನ್ಯಾಸಿ ಶಿಷ್ಯರಲ್ಲೊಬ್ಬರಾದ ಸ್ವಾಮಿ ಧೀರಾನಂದರ (ಕೃಷ್ಣಲಾಲ್ ಮಹಾರಾಜ್) ದೇಹತ್ಯಾಗವಾಗಿತ್ತು. ಈ ಹಿರಿಯ ಸಂನ್ಯಾಸಿಗಳು ಶ್ರೀಮಾತೆಯವರ ಸೇವೆಯನ್ನು ಬಹಳವಾಗಿ ಮಾಡಿದ್ದರು. ೧೯೦೧ರಲ್ಲಿ ಸ್ವಾಮೀಜಿಯವರು ಮೊದಲ ದುರ್ಗೋತ್ಸವವನ್ನು ನಡೆಸಿದ್ದಾಗ ಈ ಕೃಷ್ಣಲಾಲ್ ಮಹಾರಾಜರೇ ದೇವಿಯ ಅರ್ಚಕರಾಗಿದ್ದರು. ಇವರಿಗೆ ಎರಿಸಿಪಿಯಾಸ್ ಎಂಬ ರೋಗ ತಗುಲಿತ್ತು. 'ಉದ್ಬೋಧನ'ದಲ್ಲಿ ಇವರು ತಮ್ಮ ದೇಹತ್ಯಾಗ ಮಾಡಿದ್ದರು. *(ಮುಂದುವರಿಯುವುದು)*